## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 213 |
| ಸದಸ್ಯರ ಹೆಸರು | ಶ್ರೀ ಕುಶಾಲಪ್ಪ. ಎಂ.ಪಿ (ಸುಜಾ)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 12.08.2025 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

<table>
<tr><th>ಕ್ರ. ಸಂ</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಅ</td><td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕೆಂಪು ಕಲ್ಲುಕ್ವಾರಿಯನ್ನು ಆರಂಭಿಸಲು ಅನುಮತಿ ಇದೆಯೇ; ಇದನ್ನು ಆರಂಭಿಸಲು ಇರುವ ಮಾನದಂಡಗಳೇನು: ಮತ್ತು ಪ್ರಕ್ರಿಯೆ ಏನು;</td><td>ಇದೆ.<br>
➢ ಕೆಂಪು ಕಲ್ಲು (ಲ್ಯಾಟರೈಟ್) ಖನಿಜವು $Al_2O_3$ ಖನಿಜಾಂಶದ ತಾಂತ್ರಿಕ ಅಂಶಗಳ ಆಧಾರದ ಮೇಲೆ ಮುಖ್ಯ ಖನಿಜ ಮತ್ತು ಉಪಖನಿಜವೆಂದು ವರ್ಗೀಕೃತಗೊಳ್ಳುತ್ತದೆ.<br>
➢ ಕೆ.ಎಂ.ಎಂ.ಸಿ.ಆರ್ ನಿಯಮಗಳಡಿ ಉಪಖನಿಜದ ವ್ಯಾಪ್ತಿಗೊಳಪಡುವ ಕೆಂಪು ಕಲ್ಲು ಉಪಖನಿಜಕ್ಕೆ ನಿಯಮ 3A(a), 3A(b) ಮತ್ತು 32 ರಡಿಯಲ್ಲಿನ ಅವಕಾಶದಂತೆ ಖಾಸಗಿ/ ಪಟ್ಟಾ ಜಮೀನುಗಳಲ್ಲಿ ತೆರವುಗೊಳಿಸಲು ಕಾರ್ಯನುಮತಿ/ ಲೈಸನ್ಸ್ ನೀಡಲಾಗುತ್ತಿದೆ.<br>
➢ ಕೆಂಪುಕಲ್ಲು ಕ್ವಾರಿಯನ್ನು ಆರಂಭಿಸಲು ಕೆಎಂಎಂಸಿ ನಿಯಮಗಳು, 1994ರ ನಿಯಮ 32 ರಂತೆ ಪಟ್ಟಾ ಜಮೀನುಗಳಲ್ಲಿ ಉಪಖನಿಜಗಳ ಗಣಿಗಾರಿಕೆಗೆ ಪಟ್ಟಾದಾರರಿಗೆ ಅಥವಾ ಪಟ್ಟಾದಾರರು ಒಪ್ಪಿಗೆ ನೀಡುವ ವ್ಯಕ್ತಿಗಳಿಗೆ ಕಂದಾಯ ಮತ್ತು ಅರಣ್ಯ ಇಲಾಖೆ ನಿರಾಕ್ಷೇಪಣಾ ಪತ್ರಗಳು, ಭೂಪರಿವರ್ತನೆ ಆದೇಶ, ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರ ಪಡೆದು ಜಿಲ್ಲಾ ಟಾಸ್ಕ್‌ಫೋರ್ಸ್ (ಗಣಿ) ಸಮಿತಿಯಲ್ಲಿ ಮಂಡಿಸಿ, ಅನುಮೋದನೆ ಪಡೆದು ಸಂಬಂಧಪಟ್ಟ ಜಿಲ್ಲೆಯ ಉಪ ನಿರ್ದೇಶಕರು/ಹಿರಿಯ ಭೂವಿಜ್ಞಾನಿ ರವರಿಂದ ಕಲ್ಲು ಗಣಿಗಾರಿಕೆಗೆ ಲೈಸೆನ್ಸ್ ನೀಡಲಾಗುತ್ತಿದೆ.<br>
➢ ಕೆಎಂಎಂಸಿ ನಿಯಮಗಳು, 1994ರ ನಿಯಮ, 3-A(a) ರಂತೆ, ಪಟ್ಟಾ ಜಮೀನುಗಳನ್ನು ಸಮತಟ್ಟು ಮಾಡುವ ಸಂದರ್ಭದಲ್ಲಿ ಸ್ವಂತ ಉದ್ದೇಶಕ್ಕೆ ಬಳಕೆಯಾಗಿ ಹೆಚ್ಚುವರಿಯಾಗಿ ಉಳಿಯುವ ಕೆಂಪು ಕಲ್ಲನ್ನು ತೆಗೆದು ಸಾಗಾಣಿಕೆ ಮಾಡಲು ಅನುಮತಿ ನೀಡಲಾಗುತ್ತಿದೆ.<br>
➢ ನಿಯಮ 3-A(b) ರನ್ವಯ ಪಟ್ಟಾ ಜಮೀನಿನಲ್ಲಿನ ಕೆಂಪು ಕಲ್ಲನ್ನು ತೆರವುಗೊಳಿಸಿ ಕೃಷಿ ಯೋಗ್ಯ ಜಮೀನನ್ನಾಗಿ ಅಭಿವೃದ್ಧಿ ಮಾಡುವ ಸಂದರ್ಭದಲ್ಲಿ ಸ್ವಂತ ಉದ್ದೇಶಕ್ಕೆ ಬಳಕೆಯಾಗಿ ಹೆಚ್ಚುವರಿಯಾಗಿ ಉಳಿಯುವ ಕೆಂಪು ಕಲ್ಲನ್ನು ತೆಗೆದು ಸಾಗಾಣಿಕೆ ಮಾಡಲು ಅನುಮತಿ ನೀಡಲಾಗುತ್ತಿದೆ.<br>
➢ ಲ್ಯಾಟರೈಟ್ ನಿಕ್ಷೇಪದಲ್ಲಿ $Al_2O_3$ ಅಂಶವು ಶೇಕಡ 20 ಕ್ಕಿಂತ ಕಡಿಮೆ ಇದ್ದಲ್ಲಿ ಕೈಗಾರಿಕೆ ಉದ್ದೇಶಕ್ಕೆ ಬಳಕೆ ಮಾಡಲು ಕೆಎಂಎಂಸಿ ನಿಯಮಗಳು, 1994ರ ನಿಯಮ 32 ರಂತೆ ಅನುಮತಿ ನೀಡಲಾಗುತ್ತದೆ.</td></tr>
<tr><td>ಆ</td><td>ಗಣಿಗಾರಿಕೆ ನೀತಿ ಅನ್ವಯ ಎಷ್ಟು ಕೆಂಪು ಕಲ್ಲು ಗಣಿ ಗಾರಿಕೆಗೆ ಬ್ಲಾಕ್‌ಗಳನ್ನು ಗುರುತಿಸಲಾಗಿದೆ;</td><td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಕೆಂಪು ಕಲ್ಲು ತೆಗೆಯಲು ಕೆಎಂಎಂಸಿ ನಿಯಮಗಳು, 1994ರ ನಿಯಮ 32 ರಂತೆ ಕೆಳಕಂಡಂತೆ ಲೈಸೆನ್ಸ್‌ಗಳನ್ನು ಮಂಜೂರು ಮಾಡಲಾಗಿರುತ್ತದೆ.
<table>
<tr><th>ಕ್ರ. ಸಂ</th><th>ಜಿಲ್ಲೆ</th><th>ಲೈಸೆನ್ಸ್ ಗಳ ಸಂಖ್ಯೆ</th><th>ಒಟ್ಟು ವಿಸ್ತೀರ್ಣ (ಎಕರೆಗಳಲ್ಲಿ)</th></tr>
<tr><td>1</td><td>ದಕ್ಷಿಣ ಕನ್ನಡ</td><td>19</td><td>65.29</td></tr>
<tr><td>2</td><td>ಉಡುಪಿ</td><td>2</td><td>3.78</td></tr>
</table>
➢ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಕೆಂಪು ಕಲ್ಲು ತೆಗೆಯಲು ಕೆಎಂಎಂಸಿ ನಿಯಮಗಳು, 1994ರ ನಿಯಮ 3-A(a) ಮತ್ತು ನಿಯಮ 3-A(b) ರನ್ವಯ ರಂತೆ ಕೆಳಕಂಡ ಸಂಖ್ಯೆಯ ಕಾರ್ಯಾದೇಶಗಳು ಚಾಲ್ತಿಯಲ್ಲಿರುತ್ತವೆ.</td></tr>
</table>

| ಕ್ರ. ಸಂ | | ಲೈಸೆನ್ಸ್ ಗಳ ಸಂಖ್ಯೆ | ಒಟ್ಟು ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| 1 | ದಕ್ಷಿಣ ಕನ್ನಡ | 11 | 3.97 |
| 2 | ಉಡುಪಿ | 38 | 19.35 |

**ಇ** ಅಕ್ರಮ ಗಣಿಗಾರಿಕೆ ತಡೆಯುವ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಸರ್ಕಾರ ತೆಗೆದುಕೊಂಡ ಕ್ರಮಗಳು ಈ ಕೆಳಕಂಡಂತಿವೆ:-

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಅನಧಿಕೃತ ಕೆಂಪು ಕಲ್ಲು ಗಣಿಗಾರಿಕೆ, ಸಾಗಾಣಿಕೆ ಮತ್ತು ದಾಸ್ತಾನಿನ ಸಂಬಂಧ ಪ್ರಕರಣಗಳನ್ನು ಪತ್ತೆ ಹಚ್ಚಿದ್ದು, ಅಕ್ರಮ ಗಣಿ ಚಟುವಟಿಕೆ ನಡೆಸುತ್ತಿದ್ದವರ ವಿರುದ್ಧ ಎಂ.ಎಂ. (ಡಿ & ಆರ್) ಕಾಯ್ದೆ, 1957 ಮತ್ತು ಕೆಎಂಎಂಸಿ ನಿಯಮಗಳು, 1994ರ ನಿಯಮಗಳಂತೆ ಮೊಕದ್ದಮೆಗಳನ್ನು ದಾಖಲಿಸಿ, ದಂಡವನ್ನು ಸಂಗ್ರಹಿಸಲಾಗಿದೆ. ಕಳೆದ 03 ವರ್ಷಗಳಲ್ಲಿ ದಾಖಲು ಮಾಡಿದ ಪ್ರಕರಣಗಳ ವಿವರ ಹಾಗೂ ಸಂಗ್ರಹಿಸಿದ ದಂಡದ ಮೊತ್ತದ ವಿವರ ಕೆಳಕಂಡಂತಿದೆ:

**ದಕ್ಷಿಣ ಕನ್ನಡ ಜಿಲ್ಲೆ**

| ಕ್ರ. ಸಂ. | ವರ್ಷ | ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ | ದಾಖಲಿಸಿದ ಪ್ರಕರಣಗಳ ಸಂಖ್ಯೆ | ಸಂಗ್ರಹಿಸಿದ ದಂಡದ ಮೊತ್ತ (₹.ಲಕ್ಷಗಳಲ್ಲಿ) |
|---|---|---|---|---|
| 1 | 2022-23 | 113 | 0 | 63.77 |
| 2 | 2023-24 | 119 | 04 | 73.52 |
| 3 | 2024-25 | 101 | 17 | 36.32 |
| ಒಟ್ಟು | | 333 | 21 | 173.61 |

**ಉಡುಪಿ ಜಿಲ್ಲೆ**

| ಕ್ರ. ಸಂ. | ವರ್ಷ | ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ | ದಾಖಲಿಸಿದ ಪ್ರಕರಣಗಳ ಸಂಖ್ಯೆ | ಸಂಗ್ರಹಿಸಿದ ದಂಡದ ಮೊತ್ತ (₹.ಲಕ್ಷಗಳಲ್ಲಿ) |
|---|---|---|---|---|
| 1 | 2022-23 | 49 | 4 | 15.33 |
| 2 | 2023-24 | 77 | 0 | 17.76 |
| 3 | 2024-25 | 43 | 6 | 13.24 |
| ಒಟ್ಟು | | 169 | 10 | 46.33 |

**ಈ** ಕೆಂಪು ಕಲ್ಲಿಗೆ ಸರ್ಕಾರ ಪ್ರಸ್ತುತ ನಿಗಧಿಪಡಿಸಿರುವ ದರವೆಷ್ಟು?

- ಪಟ್ಟಾ ಜಮೀನುಗಳಲ್ಲಿ ನಿಯಮ 32 ರಡಿ ಲೈಸೆನ್ಸ್ ಪಡೆದ ಪರವಾನಗಿದಾರರಿಂದ ಕೆಂಪುಕಲ್ಲಿಗೆ (ಲ್ಯಾಟರೈಟ್ ಬ್ರಿಕ್ಸ್) ಪ್ರತಿ ಮೆಟ್ರಿಕ್ ಟನ್ ಕೆಂಪು ಕಲ್ಲಿಗೆ ₹70/- ರಾಜಧನ ಹಾಗೂ ಡಿಎಂಎಫ್‌ನಿಧಿ ಮೊತ್ತ ₹21/- ನ್ನು ವಿಧಿಸಿ ಸಂಗ್ರಹಿಸಲಾಗುತ್ತಿದೆ.
- ಲೈಸೆನ್ಸ್ ಪಡೆದ ಪರವಾನಗಿದಾರರು ಕೆಂಪು ಕಲ್ಲು ಉಪಖನಿಜವನ್ನು dispatched for use in cement or chemical industries or abrasive or refractory purpose (below threshold value as specified by IBM from time to time) ಗೆ ಸಾಗಾಣಿಕೆ ಮಾಡಿದಲ್ಲಿ ₹200/- ರಾಜಧನ ಮತ್ತು ಡಿಎಂಎಫ್ ನಿಧಿ ಮೊತ್ತ ₹60/- ಗಳನ್ನು ವಿಧಿಸಿ ಸಂಗ್ರಹಿಸಲಾಗುತ್ತಿದೆ.
- ನಿಯಮ 3-A(a)ರಡಿ ಕೆಂಪು ಕಲ್ಲು ತೆಗೆದು ಸಾಗಾಣಿಕೆ ಮಾಡುವ ಪ್ರತಿ ಮೆಟ್ರಿಕ್ ಟನ್‌ಗೆ ರಾಜಧನ ₹70/-, ಹೆಚ್ಚುವರಿ ಪಾವತಿ ₹28/- ಮತ್ತು ಡಿಎಂಎಫ್ ನಿಧಿ ಮೊತ್ತ ₹7/- ನ್ನು ವಿಧಿಸಿ ಸಂಗ್ರಹಿಸಲಾಗುತ್ತಿದೆ.
- ನಿಯಮ 3-A(b) ರಡಿ ಕೆಂಪು ಕಲ್ಲು ತೆಗೆದು ಸಾಗಾಣಿಕೆ ಮಾಡುವ ಪ್ರತಿ ಮೆಟ್ರಿಕ್ ಟನ್ ಗೆ ರಾಜಧನ ₹70/-, ಹೆಚ್ಚುವರಿ ಪಾವತಿ ₹28/- ಮತ್ತು ಡಿಎಂಎಫ್ ನಿಧಿ ಮೊತ್ತ ₹7/- ಮತ್ತು ಷೆಡ್ಯೂಲ್ II-D ಮೊತ್ತ ₹150/- ಗಳನ್ನು ವಿಧಿಸಿ ಸಂಗ್ರಹಿಸಲಾಗುತ್ತಿದೆ.
- ಕೆಂಪು ಕಲ್ಲು ಉಪಖನಿಜದ ಬಳಕೆಗೆ ಅನುಗುಣವಾಗಿ ರಾಜಧನ ಮತ್ತು ಇತರೆ ಅನ್ವಯಿಕ ಶುಲ್ಕಗಳನ್ನು ನಿಗದಿಪಡಿಸಲಾಗಿರುತ್ತದೆ.

ಸಂಖ್ಯೆ ಸಿಐ -ಎಂಎಂಎನ್/201/2025

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.